"ಸುಮಾರು ಹನ್ನೊಂದೂವರೆಗೆ."

"ಹಾಗಿದ್ರೆ ಪಾಲಯ್ಯ ಯಾರೊಂದಿಗೆ ಮಾತಾಡಿದ್ದು?"

"ಪಾಲಯ್ಯ ಸುಳ್ಳು ಹೇಳ್ತಾ ಇದ್ದಾನೆ ತನ್ನ ಮೇಲೆ ಕೊಲೆ ಆಪಾದನೆ ಬರಬಹುದು ಎಂದು ಹೆದರಿ."

"ರುದ್ರಮುನಿ ಕಟ್ಟಡವನ್ನು ಪ್ರವೇಶಿಸಿದರೂ, ಆತ ಏಕಾಏಕಿ ಎಲ್ಲಿ ಮಾಯವಾದ?"

"ಅದು ಈ ಪ್ರಕರಣಕ್ಕೆ ಸಂಬಂಧವಿಲ್ಲದ ವಿಷ್ಯ."

ಅಷ್ಟರಲ್ಲಿ ಕರಮಚಂದನ ಮೊಬೈಲು ಸದ್ದು ಮಾಡಿತು. ಆತ ತರಾತುರಿಯಿಂದ ಅದನ್ನು ಎತ್ತಿ ನೋಡಿದ. ಮಿಂಚಂಚೆಯೊಂದು ಬಂದಿತ್ತು. ಅದರಲ್ಲಿ ಆತ ಆತುರದಿಂದ ಕಣ್ಣೋಡಿಸಿದವನೇ, ನಂತರ ಗಟ್ಟಿಯಾಗಿ ನಕ್ಕು ಬಿಟ್ಟ,

"ಡಿಸೋಜ, ಈ ಬಡಪಾಯಿನ ಬಿಟ್ಟು ಬಿಡಿ... ಇಲ್ಲಿ ಕಂಪ್ಯೂಟರ್ ಒಮ್ಮೆ ನೋಡಿ. ನಿಮ್ಗೆ ಆ ದಿನದ ಸಂಜೆಯ ಸಿಸಿಟೀವಿಯ ಫೂಟೇಜ್ ತೋರಿಸ್ತೀನಿ... ಇಗೊಳ್ಳಿ... ಇಲ್ಲಿ ನೋಡಿ... ಒಬ್ಬ ಕುಳ್ಳ ಮೆಲ್ಲಗೆ ಇಳಿದು ಹೋಗ್ತಾ ಇದ್ದಾನೆ... ಸಮಯ ನೋಡಿ, ಐದೂ ಮುಕ್ಕಾಲು... ಆತ ಮೊದಲ ಮಹಡಿಯ ಎಡಗಡೆಯಿಂದ ಬಂದ... ಅಲ್ಲಿ ಯಾವ ಕಚೇರಿಯೂ ಆವತ್ತು ತೆರೆದಿರಲಿಲ್ಲ. ಆತ ಎಲ್ಲಿದ್ದ? ಅದನ್ನ ನಾವು ಸುಲಭವಾಗಿ ಊಹಿಸಿದಬಹುದು... ಆತ ಶೌಚಾಲಯದೊಳಗೆ ಇದ್ದ... ಇಲ್ಲಿ ನೋಡಿ, ಬೆಳಗ್ಗಿನ ಫೂಟೇಜ್... ಎಲ್ಲಿಯೂ ಆತ ಕಟ್ಟಡ ಪ್ರವೇಶಿಸಿದ ಚಿತ್ರ ಇಲ್ಲ..."

"ಯಾರಾತ? ಆತ ಹೇಗೆ ಕಟ್ಟಡ ಪ್ರವೇಶಿಸಿದ? ಸೋಮಯ್ಯನ ಕೊಲೆಗೆ ಹೇಗೆ ಸಂಬಂಧ?" ಡಿಸೋಜನಿಗೆ ಅಚ್ಚರಿ.

"ಅವ್ನು ಹಿಂಭಾಗದಲ್ಲಿ ಪಾಗಾರದ ಮೇಲೆ ಕಲ್ಲಿರಿಸಿ, ಅದನ್ನೇರಿ ಒಳಬಂದ. ಪಾಲಯ್ಯ ಮಾತಾಡಿದ್ದು ಇವನೊಂದಿಗೇ. ಆತನಿಗೆ ಸ್ವಲ್ಪ ಉಗ್ಗು ಇದೆ. ಚಂದ್ರಕುಮಾರ್ ಆತನ ಹೆಸರು. ಅವನೊಬ್ಬ ಹೆಸರಿಗೆ ವ್ಯಾಪಾರಿ. ಮಾಡ್ತಾ ಇರೋದು ಕಳ್ಳಸಾಗಾಟ, ವಂಚನೆ ಇತ್ಯಾದಿ. ಆತನ ಮೇಲೆ ಒಂದು ಕೊಲೆ ಆಪಾದನೆಯಿದೆ. ಪ್ರಕರಣ ನ್ಯಾಯಾಲಯದಲ್ಲಿ ಇದೆ. ಪಬ್ಲಿಕ್ ಪ್ರಾಸಿಕ್ಯೂಟರ್ ಆ ಪ್ರಕರಣದಲ್ಲಿ ಚಂದ್ರಕುಮಾರನನ್ನು ಸಿಕ್ಕಿಸಿ ಹಾಕಲು, ಸೋಮಯ್ಯನಿಂದ ಕಾನೂನು ನೆರವು ಪಡಿತಾ ಇದ್ದ. ಸೋಮಯ್ಯನ ನೆರವಿನಿಂದಾಗಿ ಪ್ರಕರಣದಲ್ಲಿ ಚಂದ್ರಕುಮಾರನಿಗೆ ಹಿನ್ನಡೆಯಾಗುತ್ತಿತ್ತು. ತೀರ್ಪು ತನ್ನ ವಿರುದ್ಧ ಬರಬಹುದೆಂದು ಭಾವಿಸಿ, ಆತ ಸೋಮಯ್ಯನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಿಗೆ ನೆರವು ನೀಡದಿರಲು ಮನವಿ ಮಾಡಿದ. ಆದ್ರೆ ಸೋಮಯ್ಯ ನಿರಾಕರಿಸಿರಬೇಕು. ಅದಕ್ಕೇ ಚಂದ್ರಕುಮಾರ್ ಸೋಮಯ್ಯನನ್ನು ಕೊಲ್ಲಲು ನಿಶ್ಚಯಿಸಿದ!"

"ನಿಮ್ಮ ಕತೆ ಚೆನ್ನಾಗಿದೆ, ಕರಮಚಂದ. ನನ್ನಲ್ಲಿ ಬೆರಳಚ್ಚು ಇರುವ ರಿವಾಲ್ವರ್ ಇದೆ. ಆ ರಿವಾಲ್ವರಿನಿಂದ ಹಾರಿದ ಗುಂಡಿನಿಂದಲೇ ಕೊಲೆ ಆಗಿದೆ. ಬೆಟ್ಟಪ್ಪ ಕೊಲೆಗೆ ಉಪಯೋಗಿಸಿದ ಕೋಣೆಯೂ ಆತನ ಹೆಸರಲ್ಲೇ ಬಾಡಿಗೆಗೆ ಇದೆ. ಬೆಟ್ಟಪ್ಪನಿಗೆ ಮೋಟಿವ್ ಕೂಡಾ ಇದೆ. ನ್ಯಾಯಾಲಯ ಯಾರ ಮಾತು ನಂಬುತ್ತೆ ಹೇಳಿ?"

"ಡಿಸೋಜ, ನೀವೊಮ್ಮೆ ಈ ಕಂಪ್ಯೂಟರ್ ನೋಡಿ. ಇದು ಆ ಕೋಣೆಯ ಮಾಲೀಕ ಪೀಟರ್ ವಿದೇಶದಿಂದ ಕಳಿಸಿದ ಮಿಂಚಂಚೆ. ಅದರಲ್ಲಿ ಆತ ಆ ಕೋಣೆಯನ್ನು ಬಾಡಿಗೆಗೆ ಪಡೆದ ವ್ಯಕ್ತಿಯ ಫೋಟೊ ಲಗತ್ತಿಸಿದ್ದಾನೆ... "

ನಾನು ಮತ್ತು ಡಿಸೋಜ ಮಿಂಚಂಚೆಯಲ್ಲಿ ಕುತೂಹಲದಿಂದ ಕಣ್ಣು ಹರಿಸಿದೆವು... ಅಲ್ಲಿ ಉತ್ತಯ್ಯನ ಫೋಟೊ ಇತ್ತು!

"ಏನು? ಉತ್ತಯ್ಯ ಕೋಣೆ ಬಾಡಿಗೆಗೆ ಪಡೆದಿದ್ದೆ? ಅದರಲ್ಲಿ ಸಹಿ ಬೆಟ್ಟಪ್ಪನದ್ದೇ ಇತ್ತು. ನಾನು ಚೆನ್ನಾಗಿ